(37)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ಆರ್ ಪಾಟೀಲ್ ರವರ ನಿಯಮ-72ರ ಗಮನ ಸೆಳೆಯುವ ಸೂಚನೆಗೆ ಉತ್ತರ ಒದಗಿಸುವ ಬಗ್ಗೆ.**

ವಿಷಯ: ರಾಜ್ಯದಲ್ಲಿ ನೇಕಾರಿಕಾ ಕಸುಬು ಮಾಡುವ ಅನೇಕ ಜನರು ಅಸಂಘಟಿತ ನೇಕಾರರಾಗಿದ್ದು, ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಿರ್ಲಕ್ಷ್ಯಧೋರಣೆಯಿಂದಾಗಿ ಈ ಉದ್ಯಮಗಳು ನಶಿಸಿ ಹೋಗುತ್ತಿವೆ. ಕಳೆದ 2-3 ವರ್ಷಗಳಿಂದ ನೆರೆ ಹಾವಳಿ ಮತ್ತು ಕೊರೋನಾ ಮಹಾಮಾರಿಯಿಂದಾಗಿ ಮತ್ತಷ್ಟು ಸಂಕಷ್ಟಕೀಡಾಗಿದ್ದಾರೆ. ರಾಜ್ಯದಲ್ಲಿ ನೇಕಾರರಿಂದ ಸ್ಥಾಪಿಸಲ್ಪಟ್ಟ ನೂಲಿನ ಗಿರಣಿಗಳು ಮುಚ್ಚುವ ಸ್ಥಿತಿಗೆ ಬಂದಿದ್ದು, ಬನಹಟ್ಟಿ ಸಹಕಾರಿ ನೂಲಿನ ಗಿರಣಿಯೂ ಸಹ ಅಧುನೀಕರಣಗೊಳಿಸಲಾಗಿದೆ ಮುಚ್ಚುವ ಹಂತ ತಲುಪಿದೆ. ಹಾಗಾಗಿ ಈ ನೇಕಾರ ವರ್ಗದ ಜನರ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಮತ್ತು ಈ ವರ್ಗದ ಜನರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಬಗ್ಗೆ.

<u>ಉತ್ತರ:</u> 4ನೇ ರಾಷ್ಟ್ರೀಯ ಕೈಮಗ್ಗ ಗಣತಿಯ ಪ್ರಕಾರ ರಾಜ್ಯದಲ್ಲಿ 54,789 ಕೈಮಗ್ಗ ನೇಕಾರರಿದ್ದಾರೆ ಹಾಗೂ ಅಂದಾಜು 1.25 ಲಕ್ಷ ವಿದ್ಯುತ್ ಮಗ್ಗಗಳು ಉತ್ಪಾದನೆಯಲ್ಲಿ ತೊಡಗಿರುತ್ತವೆ.

<u>ನೆರೆಹಾವಳಿ:</u>

ಕಳೆದ 2-3 ವರ್ಷಗಳಿಂದ ನೆರೆ. ಹಾವಳಿ ಹಾಗೂ ಅತಿವೃಷ್ಟಿಯಿಂದ ಹಾನಿಗೊಳಗಾದ ನೇಕಾರರು ಎನ್.ಡಿ.ಆರ್.ಎಫ್. ಯೋಜನೆಯಡಿ ಪರಿಹಾರಧನವನ್ನು ಪಡೆದುಕೊಂಡಿರುತ್ತಾರೆ.

ವಿವರ ಇಂತಿದೆ:-

- ಬಾಗಲಕೋಟೆ ಜಿಲ್ಲೆಯಲ್ಲಿ 2019-20ನೇ ಸಾಲಿಗೆ 240 ನೇಕಾರರಿಗೆ ತಲಾ ರೂ.25,000/-ಗಳಂತೆ ಒಟ್ಟು ರೂ.60.00 ಲಕ್ಷಗಳನ್ನು ಹಾಗೂ 2020-21ನೇ ಸಾಲಿಗೆ 117 ನೇಕಾರರಿಗೆ ಒಟ್ಟು ರೂ.7.01 ಲಕ್ಷಗಳನ್ನು ಎನ್.ಡಿ.ಆರ್.ಎಫ್. ವತಿಯಿಂದ ಪರಿಹಾರಧನ ನೀಡಲಾಗಿರುತ್ತದೆ.

- ಬೆಳಗಾವಿ ಜಿಲ್ಲೆಯಲ್ಲಿ 2019-20ನೇ ಸಾಲಿಗೆ 475 ನೇಕಾರರಿಗೆ ತಲಾ ರೂ.25,000/-ಗಳಂತೆ ಒಟ್ಟು ರೂ.118.75 ಲಕ್ಷಗಳನ್ನು ಎನ್.ಡಿ.ಆರ್.ಎಫ್. ವತಿಯಿಂದ ಪರಿಹಾರಧನ ನೀಡಲಾಗಿರುತ್ತದೆ.

2019-20ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಎನ್.ಹೆಚ್.ಡಿ.ಪಿ. ಯೋಜನೆಯಡಿ ಬೆಳಗಾವಿ & ಬಾಗಲಕೋಟೆ ಜಿಲ್ಲೆಯ 139 ನೇಕಾರರಿಗೆ ಮಗ್ಗ, ಸಲಕರಣೆ ಹಾಗೂ ಕಾರ್ಯಗಾರಗಳ ನಿರ್ಮಾಣಕ್ಕಾಗಿ ರೂ.61.70 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

<u>ಕೈಮಗ್ಗ ನೇಕಾರರಿಗೆ ಕೋವಿಡ್ ಪರಿಹಾರ:</u>

2020-21ನೇ ಸಾಲಿನಲ್ಲಿ ಕೋವಿಡ್-19 ಸಂಕಷ್ಟದ ಪರಿಹಾರವಾಗಿ 54,789 ಕೈಮಗ್ಗ ನೇಕಾರರಿಗೆ ನೇಕಾರ ಸಮ್ಮಾನ್ ಯೋಜನೆಯಡಿ ಪ್ರತಿ ವರ್ಷವೂ ರೂ.2,000/-ಗಳಂತೆ ನೇರ ನಗದು ವರ್ಗಾವಣೆ ಮೂಲಕ ಜಮೆ ಮಾಡಲಾಗುವುದೆಂದು ಸರ್ಕಾರವು ಘೋಷಿಸಿರುತ್ತದೆ.

..2

ಅದರಂತೆ 2020-21ನೇ ಸಾಲಿಗೆ 47,045 ಕೈಮಗ್ಗ ನೇಕಾರರಿಗೆ ತಲಾ ರೂ.2,000/- ಗಳಂತೆ ಒಟ್ಟು ರೂ.9.409 ಕೋಟಿಗಳನ್ನು ನೇರ ನಗದು ವರ್ಗಾವಣೆ ಮುಖಾಂತರ ಹಣ ವರ್ಗಾಯಿಸಲಾಗಿರುತ್ತದೆ.

2021-22ನೇ ಸಾಲಿನಲ್ಲಿ ಇದುವರೆಗೆ (ದಿನಾಂಕ:13-09-2021ಕ್ಕೆ ಇದ್ದಂತೆ) 46,811 ಕೈಮಗ್ಗ ನೇಕಾರರಿಗೆ ತಲಾ ರೂ.2,000/-ಗಳಂತೆ ಒಟ್ಟು ರೂ.9.3622 ಕೋಟಿಗಳನ್ನು ನೇರ ನಗದು ವರ್ಗಾವಣೆ ಮುಖಾಂತರ ಹಣ ವರ್ಗಾಯಿಸಲಾಗಿರುತ್ತದೆ.

<u>ವಿದ್ಯುತ್ ಮಗ್ಗ ನೇಕಾರರಿಗೆ ಕೋವಿಡ್ ಪರಿಹಾರ:-</u>

2020-21ನೇ ಸಾಲಿನಲ್ಲಿ ಕೋವಿಡ್-19 ಸಂಕಷ್ಟದ ಪರಿಹಾರವಾಗಿ ವಿದ್ಯುತ್ ಚಾಲಿತ ಘಟಕ(ಮಗ್ಗ)ಗಳಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಕೂಲಿ ಕಾರ್ಮಿಕರಿಗೆ ಒಂದು ಬಾರಿಗೆ ಮಾತ್ರ ಅನ್ವಯಿಸುವಂತೆ ರೂ.2,000/- ಗಳಂತೆ ನೇರ ನಗದು ವರ್ಗಾವಣೆ ಮೂಲಕ ವರ್ಗಾಯಿಸಲು ಸರ್ಕಾರವು ಆದೇಶಿಸಿರುತ್ತದೆ.

ಅದರಂತೆ 2020-21ನೇ ಸಾಲಿಗೆ 51,869 ವಿದ್ಯುತ್ ಮಗ್ಗ ನೇಕಾರರಿಗೆ ತಲಾ ರೂ.2,000/-ಗಳಂತೆ ಒಟ್ಟು ರೂ.10.37 ಕೋಟಿಗಳನ್ನು ನೇರ ನಗದು ವರ್ಗಾವಣೆ ಮುಖಾಂತರ ಹಣ ವರ್ಗಾಯಿಸಲಾಗಿರುತ್ತದೆ.

2021-22ನೇ ಸಾಲಿನಲ್ಲಿ ಕೋವಿಡ್-19, 2ನೇ ಅಲೆಯ ಸಂಕಷ್ಟದ ಪರಿಹಾರವಾಗಿ ಪ್ರತಿ ಪವರ್ ಲೂಮ್ ಗೆ ಇಬ್ಬರು ಕೆಲಸಗಾರರಿಗೆ ಮೀರದಂತೆ ತಲಾ ರೂ.3,000/-ದಂತೆ ಪರಿಹಾರ ನೀಡಲು ಸರ್ಕಾರವು ಘೋಷಿಸಿದೆ.

2021-22ನೇ ಸಾಲಿನಲ್ಲಿ ಇದುವರೆಗೆ (ದಿನಾಂಕ:13-09-2021 ಕ್ಕೆ ಇದ್ದಂತೆ) 65,152 ವಿದ್ಯುತ್ ಮಗ್ಗ ಕೆಲಸಗಾರರಿಗೆ ತಲಾ ರೂ.3,000/-ಗಳಂತೆ ಒಟ್ಟು ರೂ.19.54 ಕೋಟಿಗಳನ್ನು ನೇರ ನಗದು ವರ್ಗಾವಣೆ ಮುಖಾಂತರ ಹಣ ವರ್ಗಾಯಿಸಲಾಗಿರುತ್ತದೆ.

**ರಾಜ್ಯದ ಕೈಮಗ್ಗ ನೇಕಾರರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಮಗ್ಗ ನೇಕಾರರ ಉದ್ಯಮಗಳನ್ನು ಪ್ರೋತ್ಸಾಹಿಸಲು ಕಳೆದ ಮೂರು ವರ್ಷಗಳ ಯೋಜನೆಗಳ ಮಾಹಿತಿಯು ಈ ಕೆಳಕಂಡಂತಿರುತ್ತವೆ.**

**ಕೇಂದ್ರ ಸರ್ಕಾರದ ಯೋಜನೆಗಳು:-**

- ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ(ಎನ್.ಹೆಚ್.ಡಿ.ಪಿ)ಯಡಿ ನೇಕಾರರ ಸೇವಾ ಕೇಂದ್ರದ ಮೂಲಕ ಕೈಮಗ್ಗ ನೇಕಾರರ ಸಾಂದ್ರತೆಯ ಪ್ರದೇಶಗಳಲ್ಲಿ 7 ಬ್ಲಾಕ್ ಲೆವೆಲ್ ಹ್ಯಾಂಡ್ ಲೂಮ್ಸ್ ಕ್ಲಸ್ಟರ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ 9 ವಿಶೇಷ ಕೈಮಗ್ಗ ಮೇಳಗಳನ್ನು ಆಯೋಜಿಸಲಾಗಿರುತ್ತದೆ.

- ಮುದ್ರಾ ಯೋಜನೆಯಡಿ ಕೈಮಗ್ಗ ನೇಕಾರರಿಗೆ ಚಟುವಟಿಕೆಗಳಿಗಾಗಿ ರಾಷ್ಟ್ರೀಕೃತ ಬ್ಯಾಂಕ್ ಗಳ ಮೂಲಕ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ರಾಜ್ಯ ಸರ್ಕಾರದ ಯೋಜನೆಗಳು:-

- <u>ನೇಕಾರರ ಸಾಲ ಮನ್ನಾ</u>

ಕಳೆದ ಮೂರು ವರ್ಷಗಳಲ್ಲಿ, ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ವಿವಿಧ ಸಹಕಾರ ಬ್ಯಾಂಕ್ ಮತ್ತು ಸಂಘಗಳಿಂದ ರೂ.1.00 ಲಕ್ಷಗಳವರೆಗಿನ ಸಾಲ ಪಡೆದಿರುವ 33,024 ಅರ್ಹ ನೇಕಾರರ ಒಟ್ಟು ರೂ.111.08 ಕೋಟಿಗಳ ಸಾಲ ಮನ್ನಾ ಮಾಡಲಾಗಿರುತ್ತದೆ.

- <u>ಶೇಕಡ 20 ರಿಬೇಟ್</u>

ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳ ತನ್ನ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಸರ್ಕಾರ ನೀಡುವ ಶೇಕಡಾ 20 ರಿಬೇಟ್ ಅನ್ನು ವರ್ಷದ 365 ದಿನಗಳಿಗೆ (ವರ್ಷ ಪೂರ್ತಿ) ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ಶೇಕಡ 20 ರಿಬೇಟ್ ನ್ನು ರಾಜ್ಯ ಸರ್ಕಾರದ ವತಿಯಿಂದ ಮರುಪಾವತಿಸಲಾಗುವುದು.

- <u>ಶೇ.1 ಮತ್ತು ಶೇ.3 ರ ದರದಲ್ಲಿ ಬಡ್ಡಿ ಸಹಾಯಧನ</u>

ನೇಕಾರರ ಸಹಕಾರ ಸಂಘಗಳು/ ಕೃಷಿಯೇತರ ಪತ್ತಿನ ಸಹಕಾರಿ ಸಂಘ/ಪಟ್ಟಣ ಸಹಕಾರಿ ಬ್ಯಾಂಕ್ ಗಳಿಂದ ರೂ.2.00 ಲಕ್ಷಗಳವರೆಗೆ ಶೇ.1 ರ ಬಡ್ಡಿ ದರದಲ್ಲಿ ಸಾಲ ಹಾಗೂ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಶೇ.3 ರ ಬಡ್ಡಿ ದರದಲ್ಲಿ ನೀಡಿದ ಸಾಲಕ್ಕೆ ರಾಜ್ಯ ಸರ್ಕಾರವು ಬಡ್ಡಿ ಸಹಾಯಧನ ನೀಡಲಾಗುವುದು.

- <u>ಮಿತವ್ಯಯ ನಿಧಿ ಯೋಜನೆ</u>

ನೇಕಾರರಿಗೆ ಉಳಿತಾಯ ಪ್ರವೃತ್ತಿ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಮಜೂರಿಯಿಂದ ಶೇ.8 ರಷ್ಟನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇ.8 ರಷ್ಟು ಸಮಚಂದಾ ಸೇರಿಸಿ, ಖಜಾನೆಯಲ್ಲಿ ಜಮಾ ಮಾಡಲಾಗುವುದು. ಜಮೆಯಾದ ಮೊತ್ತಕ್ಕೆ ಶೇ.12 ರ ಬಡ್ಡಿಯನ್ನು ನೀಡಲಾಗುವುದು. ಈ ಯೋಜನೆಯಡಿ ಫಲಾನುಭವಿಗಳ ಮದುವೆ, ಮನೆ ನಿರ್ಮಾಣ, ವೈದ್ಯಕೀಯ ವೆಚ್ಚ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಮುಂಗಡವನ್ನು ಪಡೆಯಬಹುದಾಗಿದೆ.

- <u>ಕಚ್ಚಾ ಮಾಲು ಖರೀದಿ ಮೇಲೆ ಸಹಾಯಧನ</u>

ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಮತ್ತು ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ ಮುಖಾಂತರ ಕೈಮಗ್ಗ ಸಹಕಾರ ಸಂಘಗಳು ಖರೀದಿಸುವ ಕಚ್ಚಾ ನೂಲಿಗೆ ಪ್ರತಿ ಕೆ.ಜಿ.ಗೆ ರೂ.15/- ರ ಸಹಾಯಧನ ನೀಡಲಾಗುವುದು.

..4

- <u>ನೇಕಾರರ ಪ್ಯಾಕೇಜ್ - ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ</u>

  ವಾಣಿಜ್ಯ ಬ್ಯಾಂಕ್ ಗಳಿಂದ ಪಡೆದಿರುವ ದುಡಿಮೆ ಬಂಡವಾಳ ಸಾಲಕ್ಕೆ ಮತ್ತು ನಿಗಮದ ಪುನಃಶ್ಚೇತನ ಮತ್ತು ಪುನರ್ ರಚನೆಗೆ ಪಡೆದ ಸಾಲಕ್ಕೆ ಬಡ್ಡಿ ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಸತಿ ನಿಲಯಗಳ ಬೇಡಿಕೆಯಂತೆ ಬೆಡ್ ಶೀಟ್/ ಜಮಖಾನೆ/ ಟವೆಲ್ ಹಾಗೂ ಇತರೆ ವಸ್ತ್ರಗಳನ್ನು ಸರಬರಾಜು ಮಾಡಲು ಈ ಯೋಜನೆಯಡಿ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ.

- **ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ ನಿ., (ಕಾವೇರಿ ಹ್ಯಾಂಡ್ ಲೂಮ್ಸ್):**

  ಕಾವೇರಿ ಹ್ಯಾಂಡ್ ಲೂಮ್ಸ್ ನೇಕಾರರ ಉತ್ಪನ್ನಗಳ ಮಾರಾಟಕ್ಕಾಗಿ ಮಾರುಕಟ್ಟೆ ಪ್ರೋತ್ಸಾಹನ ಹಾಗೂ ಸಿಬ್ಬಂದಿ ವೇತನ ಮತ್ತು ಇತರೆ ಕಚೇರಿ ವೆಚ್ಚಗಳಿಗೆ ಅನುದಾನ ನೀಡಲಾಗುವುದು.

**ಮೇಲ್ಕಂಡ ಯೋಜನೆಗಳಡಿ ಕಳೆದ 04 ಸಾಲುಗಳಲ್ಲಿ ಇಲಾಖೆಯಿಂದ ನೇಕಾರರಿಗೆ ಒದಗಿಸಿರುವ ಸಹಾಯಧನ ವಿವರ ಇಂತಿದೆ:-**

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಯೋಜನೆ | 2018-19 | | 2019-20 | | 2020-21 | | 2021-22 | |
|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ನೇಕಾರರ ಸಾಲ ಮನ್ನಾ | 7459 | 2080.66 | 9765 | 3272.00 | 15800 | 5755.42 | - | - |
| 2 | ಶೇ.20 ರಿಬೇಟ್ | 92 | 545.97 | 91 | 468.92 | 77 | 431.05 | - | - |
| 3 | ಶೇ.1 ಮತ್ತು ಶೇ.3 ರ ದರದಲ್ಲಿ ಬಡ್ಡಿ ಸಹಾಯಧನ | 52 | 459.69 | 28 | 77.56 | 12 | 53.00 | - | - |
| 4 | ಮಿತವ್ಯಯ ನಿಧಿ ಸಮಚಂದಾ | 81 | 39.56 | 123 | 83.49 | 72 | 38.51 | - | - |
| 5 | ಮಿತವ್ಯಯ ನಿಧಿ ಬಡ್ಡಿ ಮೊತ್ತ | 69 | 111.53 | 72 | 160.05 | 37 | 118.84 | - | - |
| 6 | ಕಚ್ಚಾ ಮಾಲು ಖರೀದಿ ಮೇಲಿನ ಸಹಾಯಧನ | 30 | 17.78 | 40 | 13.69 | 23 | 14.09 | - | - |
| 7 | ನೇಕಾರರ ಪ್ಯಾಕೇಜ್ - ಕೆ.ಹೆಚ್.ಡಿ.ಸಿ. | 1 | 939.00 | 1 | 2000.00 | 1 | 4000.00 | 1 | 375.00 |
| 8 | ಕಾವೇರಿ ಹ್ಯಾಂಡ್ ಲೂಮ್ಸ್ | 1 | 50.00 | 1 | 50.00 | 1 | 50.00 | - | - |
| 9 | ಮುದ್ರಾ ಯೋಜನೆ | 638 | 316.30 | 294 | 1086.05 | 102 | 52.00 | 47 | 23.50 |

ವಿದ್ಯುತ್ ಮಗ್ಗ ನೇಕಾರರಿಗೆ ಈ ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ:-

1. **02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ:**

2011-12ನೇ ಸಾಲಿನ ಆಯವ್ಯಯದಲ್ಲಿ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸುವ ಒಂದು ಹೊಸ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ಪ್ರತಿ ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸಲು ಉದ್ದೇಶಿಸಲಾಗಿರುತ್ತದೆ.

- ಘಟಕ ವೆಚ್ಚ ರೂ.3.00 ಲಕ್ಷ
- ಸರ್ಕಾರದ ಸಹಾಯಧನ:

  ಸಾಮಾನ್ಯ ವರ್ಗ - ಶೇ.50 ಗರಿಷ್ಠ ರೂ.1.50 ಲಕ್ಷ / ಬ್ಯಾಂಕ್ ಸಾಲ -ಶೇ.50
  ಪ.ಜಾ / ಪ.ಪಂ-ಶೇ.90 ಗರಿಷ್ಠ ರೂ.2.70 ಲಕ್ಷ / ಬ್ಯಾಂಕ್ ಸಾಲ /
  ಫಲಾನುಭವಿ ವಂತಿಕೆ -ಶೇ.10

2. **ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ**

ಹಾಲಿ ಕಾರ್ಯನಿರತ ವಿದ್ಯುತ್ ಮಗ್ಗಗಳಲ್ಲಿ ವಿನ್ಯಾಸವನ್ನು ಪ್ರತಿ ಬಾರಿ ಬದಲಾಯಿಸಲು ಯಾಂತ್ರಿಕ ಸೆಟ್ಟಿಂಗ್ ಬದಲಾಯಿಸಬೇಕಾಗುತ್ತದೆ. ಆದ್ದರಿಂದ ಈ ತೊಂದರೆಯನ್ನು ನಿವಾರಿಸಲು ಹಾಗೂ ಕನಿಷ್ಠ ವೆಚ್ಚದಲ್ಲಿ ಹೆಚ್ಚಿನ ವಿನ್ಯಾಸಗಳನ್ನು ಪಡೆಯಲು ಎಲೆಕ್ಟ್ರಾನಿಕ್ ಜಕಾರ್ಡ್ ನ್ನು ಪರಿಚಯಿಸಲಾಗಿದ್ದು, ಇದು ಸೀರೆಗಳಲ್ಲಿ ವಿವಿಧ ಡಿಸೈನ್ ಗಳನ್ನು ಅಳವಡಿಸಲು ಅನುಕೂಲವಾಗಿರುತ್ತದೆ.

- ಘಟಕ ವೆಚ್ಚ ರೂ.4.50 ಲಕ್ಷ
- ಸರ್ಕಾರದ ಸಹಾಯಧನ:

  ಸಾಮಾನ್ಯ ವರ್ಗ - ಶೇ.50 ಗರಿಷ್ಠ ರೂ.2.25 ಲಕ್ಷ / ಬ್ಯಾಂಕ್ ಸಾಲ - ಶೇ.50
  ಪ.ಜಾ / ಪ.ಪಂ-ಶೇ.90 ಗರಿಷ್ಠ ರೂ.4.05 ಲಕ್ಷ/ ಬ್ಯಾಂಕ್ ಸಾಲ-ಶೇ.10

3. **ವಿದ್ಯುತ್ ರಿಯಾಯಿತಿ ಸಹಾಯಧನ:**

01 ರಿಂದ 20 ಹೆಚ್.ಪಿ. ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳಿಗೆ ಪ್ರತಿ ಯೂನಿಟ್ ಗೆ ರೂ.1.25 ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿದ್ದು, ಉಳಿಕೆ ಮೊಬಲಗನ್ನು ಸರ್ಕಾರವು ಭರಿಸುತ್ತಿದೆ.

ಮೇಲ್ಕಂಡ 03 ಯೋಜನೆಗಳಡಿ ಕಳೆದ 04 ಸಾಲುಗಳಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೇಕಾರರಿಗೆ ಒದಗಿಸಿರುವ ಸಹಾಯಧನದ ವಿವರ ಇಂತಿದೆ:-:

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಯೋಜನೆ | 2018-19 | | 2019-20 | | 2020-21 | | 2021-22 | |
|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ | 49 | 83.65 | 120 | 241.80 | 177 | 351.25 | 12 | 25.90 |
| 2 | ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ | 23 | 55.35 | 57 | 137.25 | 103 | 256.94 | 20 | 57.85 |
| 3 | ವಿದ್ಯುತ್ ರಿಯಾಯಿತಿ ಸಹಾಯಧನ | 29,000 | 6325.79 | 30,000 | 4043.79 | 32,668 | 17765.69 | - | - |

<u>ನೂಲಿನ ಗಿರಣಿ:</u>

ಬಾಗಲಕೋಟೆ ಜಿಲ್ಲೆಯಲ್ಲಿ ಬನಹಟ್ಟಿ ಸಹಕಾರಿ ನೂಲಿನ ಗಿರಣಿಯು 25,000 ಸ್ಪಿಂಡಲ್ ಸಾಮರ್ಥ್ಯದಿಂದ ಕಾರ್ಯನಿರ್ವಹಿಸುತ್ತಿದ್ದು, ಕೋವಿಡ್ ಸಂಕಷ್ಟದ ಸಂದರ್ಭದಲ್ಲಿಯೂ ಸಹ ಸರ್ಕಾರದ ಕೋವಿಡ್ ಮಾರ್ಗಸೂಚಿಯನ್ವಯ ಗಿರಣಿಯು ಕಾರ್ಯನಿರ್ವಹಿಸಿರುತ್ತದೆ. ಪ್ರಸ್ತುತ ಸದರಿ ನೂಲಿನ ಗಿರಣಿಯಲ್ಲಿ 425 ಕಾರ್ಮಿಕರು ಉದ್ಯೋಗದಲ್ಲಿ ತೊಡಗಿಕೊಂಡಿರುತ್ತಾರೆ. ಈ ನೂಲಿನ ಗಿರಣಿಯ ಅಭಿವೃದ್ಧಿ ಹಾಗೂ ಪುನಃಶ್ಚೇತನಕ್ಕಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯ ವತಿಯಿಂದ ಅನುದಾನ ಒದಗಿಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿರುತ್ತದೆ:-

- ಸರ್ಕಾರದ ಆದೇಶ ಸಂಖ್ಯೆ: ಸಇ/01 ಸಿಐಎಂ/2007, ದಿನಾಂಕ:05.11.2007 ರ ಸರ್ಕಾರದ ಆದೇಶದಂತೆ ಸದರಿ ನೂಲಿನ ಗಿರಣಿ ಆಧುನೀಕರಣ ಯೋಜನೆಗಾಗಿ ರೂ.13.05 ಕೋಟಿಗಳ ಆರ್ಥಿಕ ಸಹಾಯವನ್ನು ಸರ್ಕಾರವು ಮಂಜೂರು ಮಾಡಿರುತ್ತದೆ.

- 2015-16ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ವಾಕೈ 77 ಜಕೈಯೋ 2015, ದಿನಾಂಕ:24.09.2016 ರಂತೆ ನೂಲಿನ ಗಿರಣಿಗೆ ನೀಡಲಾದ ಸರ್ಕಾರಿ ಸಾಲ ರೂ.1170.00 ಲಕ್ಷಗಳ ಪೈಕಿ ರೂ.1169.82 ಲಕ್ಷಗಳನ್ನು ಸರ್ಕಾರದ ಷೇರು ಬಂಡವಾಳವಾಗಿ ಪರಿವರ್ತಿಸಲಾಗಿರುತ್ತದೆ.

- 2018ನೇ ಸಾಲಿನಿಂದ ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾ ಸಂಸ್ಥೆಯಿಂದ ಖರೀದಿಸಲಾಗುವ ಹತ್ತಿಗೆ ಶೇ.5 ರಷ್ಟು ಸಹಾಯಧನವನ್ನು ರಾಜ್ಯ ಸರ್ಕಾರದ ವತಿಯಿಂದ ನೀಡಲಾಗುತ್ತಿದೆ.

..7

- ಪ್ರಸ್ತುತ ನೇಕಾರರ ಪ್ಯಾಕೇಜ್ ಯೋಜನೆಯಡಿ ಪ್ರತಿ ಯೂನಿಟ್ ಗೆ ರೂ.2/– ರಂತೆ 2018–19ನೇ ಸಾಲಿನಲ್ಲಿ ರೂ.85.64 ಲಕ್ಷಗಳು, 2019–20ನೇ ಸಾಲಿನಲ್ಲಿ ರೂ.56.12 ಲಕ್ಷಗಳು ಮತ್ತು 2020–21ನೇ ಸಾಲಿನಲ್ಲಿ ರೂ.37.94 ಲಕ್ಷಗಳ ವಿದ್ಯುತ್ ಸಹಾಯಧನ ಮಂಜೂರು ಮಾಡಲಾಗಿರುತ್ತದೆ.

(ಶಂಕರ ಬ ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ ಹಾಗೂ ಸಕ್ಕರೆ ಅಭಿವೃದ್ಧಿ ಸಚಿವರು